**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**
**ಸಿ. ಸಿ. ನಂ. 857/2023**

ಸಿಡಬ್ಲ್ಯೂ-04
ಪಿಡಬ್ಲ್ಯೂ-03

| | |
|---|---|
| ಸಾಕ್ಷಿದಾರರ ಹೆಸರು | ಜಗದೀಶ ಮರಿಗೌಡ್ರ |
| ತಂದೆ ಹೆಸರು | ಶಿವಪ್ಪ |
| ವಯಸ್ಸು | 24 ವರ್ಷ |
| ಉದ್ಯೋಗ | ಪುಸ್ತಕ ಅಂಗಡಿಯಲ್ಲಿ ಕೆಲಸ |
| ವಾಸ ಸ್ಥಳ | ಕೆಲವರಕೊಪ್ಪ ಗ್ರಾಮ |

**ದಿನಾಂಕ : 03-12-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ ಃ**

1. ಚಾಸಾ-1 ಮತ್ತು 3 ರವರ ಪರಿಚಯ ಇರುತ್ತದೆ. ಸಾಕ್ಷಿಯು ಅಪಘಾತಕ್ಕೀಡಾದ ವಾಹನಗಳ ಪಂಚನಾಮೆಯನ್ನು ನೋಡುತ್ತಿದ್ದು, ಅದರಲ್ಲಿ ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ-5 ಎಂದು ಗುರುತಿಸಿದ್ದು, ಅದರಲ್ಲಿ ಸಾಕ್ಷಿಯು ಗುರುತಿಸಿದ ಸಹಿಯನ್ನು ನಿ.ಪಿ-5(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಪೊಲೀಸರು ದಿಃ 23-10-2022 ರಂದು ಮಧ್ಯಾಹ್ನ 12.00 ರಿಂದ 1.00 ಗಂಟೆ ಅವಧಿಯಲ್ಲಿ ತಿಳುವಳ್ಳಿಯ ಹೊರ ಪೊಲೀಸ್ ಠಾಣೆಯಲ್ಲಿ ಜರುಗಿಸಿರುತ್ತಾರೆ. ಪಂಚನಾಮೆಯನ್ನು ಬರೆಯುವಾಗ ವಾಹನವನ್ನು ಚಾಸಾ-1 ರವರು ತೋರಿಸಿರುತ್ತಾರೆ. ಸದರಿ ಪಂಚನಾಮೆಯಲ್ಲಿ ಇರುವ ಸಂಗತಿಗಳ ಬಗ್ಗೆ ಮಾಹಿತಿ ಇದೆ. ಪಂಚನಾಮೆ ಸಮಯಕ್ಕೆ ಪೊಲೀಸರು ಒಂದು ಛಾಯಾ ಚಿತ್ರವನ್ನು ತೆಗೆದಿರುತ್ತಾರೆ. ಸಾಕ್ಷಿಯು ಸದರಿ ಛಾಯಾ ಚಿತ್ರದಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಛಾಯಾ ಚಿತ್ರವನ್ನು ಈಗಾಗಲೇ ನಿ.ಪಿ-6 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಟಿ.ಕೆ ವಕೀಲರಿಂದ:</u>**

ಚಾಸಾ-1, 3 ಮತ್ತು ಚಾಸಾ-5 ರವರು ನನ್ನ ಸಂಬಂಧಿಗಳು ಎಂದರೆ ಸಾಕ್ಷಿಯು ನಮ್ಮ ಗ್ರಾಮದವರು ಎಂದು ತಿಳಿಸಿ, ಮುಂದುವರೆದು ನಾನು ಚಾಸಾ-1 ರವರಿಗೆ ಸಂಬಂಧದಲ್ಲಿ ಅಳಿಯ ಎಂದು ನುಡಿಯುತ್ತಾರೆ. ಇಂದು ನ್ಯಾಯಾಲಯಕ್ಕೆ ನನ್ನನ್ನು ಚಾಸಾ-1 ರವರು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನ್ಯಾಯಾಲಯದಿಂದ ಸಮನ್ಸ ಬಂದ ಕಾರಣಕ್ಕೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪಂಚನಾಮೆ ಸಮಯಕ್ಕೆ ಪೊಲೀಸರು ಛಾಯಾ ಚಿತ್ರವನ್ನು ತೆಗೆದು ನನ್ನ ಸಹಿ ಪಡೆದಿರುತ್ತಾರೆ. ನಿ.ಪಿ-5 ರ ಪಂಚನಾಮೆಯಲ್ಲಿ ಇರುವ ಸಂಗತಿಗಳು ನಾನು ಓದಿ ತಿಳಿದುಕೊಂಡಿರುತ್ತೇನೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 12.00 ಗಂಟೆಗೆ ಬರೆಯಲು ಪ್ರಾರಂಭಿಸಿದ್ದು, 1.00 ಗಂಟೆಗೆ ಮುಗಿದಿರುತ್ತದೆ. ಚಾಸಾ-1 ಮತ್ತು 5 ರವರು ನನ್ನ ಸಂಬಂಧಿಗಳು ಇರುವುದರಿಂದ, ಚಾಸಾ-1 ರವರು ನೀಡಿರುವ ಸುಳ್ಳು ಪಿರ್ಯಾದಿಗೆ ಅನುಗುಣವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ

**<u>ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್</u>**
**<u>ಸಿ. ಸಿ. ನಂ. 857/2023</u>**

ಸಿಡಬ್ಲ್ಯೂ-02
ಪಿಡಬ್ಲ್ಯೂ-02

| | |
|---|---|
| ಸಾಕ್ಷಿದಾರರ ಹೆಸರು | ಶಿವಲಿಂಗ ದೊಡ್ಡಲಿಂಗಣ್ಣನವರ |
| ತಂದೆ ಹೆಸರು | ಮೂಕಪ್ಪ |
| ವಯಸ್ಸು | 25 ವರ್ಷ |
| ಉದ್ಯೋಗ | ಕೂಲಿ |
| ವಾಸ ಸ್ಥಳ | ಕೆಲವರಕೊಪ್ಪ ಗ್ರಾಮ |

**ದಿನಾಂಕ : 03-12-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ ಃ</u>**

1. ಚಾಸಾ-1 ಮತ್ತು 3 ರವರ ಪರಿಚಯ ಇರುತ್ತದೆ. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯನ್ನು ನೋಡುತ್ತಿದ್ದು, ಅದರಲ್ಲಿ ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಿದ್ದು, ಅದರಲ್ಲಿ ಸಾಕ್ಷಿಯು ಗುರುತಿಸಿದ ಸಹಿಯನ್ನು ನಿ.ಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಪೊಲೀಸರು ಚಾಸಾ-1 ರವರು ತೋರಿಸಿದ ಘಟನಾ ದಿಃ 23-10-2022 ರಂದು ಬೆಳಗ್ಗೆ 10.00 ರಿಂದ 11.00 ಗಂಟೆ ಅವಧಿಯಲ್ಲಿ ಜರುಗಿಸಿರುತ್ತಾರೆ. ಪಂಚನಾಮೆಯಲ್ಲಿ ಇರುವ ಸಂಗತಿಗಳ ಬಗ್ಗೆ ಮಾಹಿತಿ ಇದೆ. ಪಂಚನಾಮೆ ಸಮಯಕ್ಕೆ ಪೊಲೀಸರು ಎರಡು ಛಾಯಾ ಚಿತ್ರಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು ಸದರಿ ಛಾಯಾ ಚಿತ್ರಗಳಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಛಾಯಾ ಚಿತ್ರಗಳನ್ನು ಈಗಾಗಲೇ ನಿ.ಪಿ-3 ಮತ್ತು 4 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಟಿ.ಕೆ ವಕೀಲರಿಂದ:**

1. ಚಾಸಾ-1, 3 ಮತ್ತು ಚಾಸಾ-5 ರವರು ನನಗೆ ಆತ್ಮೀಯರು ಎಂದರೆ ಸಾಕ್ಷಿಯು ಪರಿಚಯ ಇರುತ್ತಾರೆ ಎಂದು ನುಡಿಯುತ್ತಾರೆ. ನಾನು ಕೃಷಿ ಕೆಲಸ ಮಾಡುತ್ತೇನೆ. ನಮ್ಮ ಜಮೀನಿನಲ್ಲಿ ಕೆಲಸ ಇದ್ದಾಗ ಸಹಾಯಕ್ಕೆ ಚಾಸಾ-5 ರವರು ಮತ್ತು ಅವರಿಗೆ ಜಮೀನಿನಲ್ಲಿ ಕೆಲಸ ಇದ್ದಾಗ ನಾನು ಅವರಿಗೆ ಸಹಾಯ ಮಾಡುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ಎರಡು ಗಂಟೆಗಳ ನಂತರ ನಾನು ಘಟನಾ ಸ್ಥಳಕ್ಕೆ ಹೋಗಿದ್ದೆ. ಪಂಚನಾಮೆಯನ್ನು ದಿಃ 23-10-2022 ರಂದು ಬೆಳಗ್ಗೆ 10.00 ರಿಂದ 11.00 ರ ಅವಧಿಯಲ್ಲಿ ಬರೆದಿದ್ದರು. ಘಟನಾ ಸ್ಥಳದಲ್ಲಿ ಕೆ ಎಸ್ ಆರ್ ಟಿ ಸಿ ಬಸ್ಸಿನ ಚಕ್ರ ಮತ್ತು ದ್ವಿಚಕ್ರ ವಾಹನದ ಚಕ್ರದ ಗುರುತುಗಳು ಇದ್ದವು. ಅಪಘಾತವಾದ ರಸ್ತೆಯಲ್ಲಿ ಇದ್ದ ಚಕ್ರದ ಗುರುತುಗಳನ್ನು ಛಾಯಾ ಚಿತ್ರ ಮಾಡಿ ತೆಗೆಯುವಂತೆ ನಾನು ಸೂಚನೆ ನೀಡಿರಲಿಲ್ಲ.

2. ನಿ.ಪಿ-2 ರ ಪಂಚನಾಮೆಯನ್ನು ಪೊಲೀಸರು ಬರೆದು ಇಟ್ಟಿದ್ದು, ನಂತರ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಪಂಚನಾಮೆಯ ಸಂಗತಿಗಳನ್ನು ಬರೆಯಲು ಪೊಲೀಸರು ನನ್ನಿಂದ ಯಾವುದೇ ಮಾಹಿತಿಗಳನ್ನು ಪಡೆದಿರುವುದಿಲ್ಲ. ಸದರಿ ಪಂಚನಾಮೆಯಲ್ಲಿ ಯಾವ ಸಂಗತಿಗಳನ್ನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.
**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ

**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**
**ಸಿ. ಸಿ. ನಂ. 857/2023**

ಸಿಡಬ್ಲ್ಯೂ-01
ಪಿಡಬ್ಲ್ಯೂ-01

| | |
|---|---|
| ಸಾಕ್ಷಿದಾರರ ಹೆಸರು | ರಮೇಶ ಹುಚ್ಚನಿಂಬಣ್ಣನವರ |
| ತಂದೆ ಹೆಸರು | ಗುಡ್ಡಪ್ಪ |
| ವಯಸ್ಸು | 32 ವರ್ಷ |
| ಉದ್ಯೋಗ | ಅತಿಥಿ ಶಿಕ್ಷಕರು |
| ವಾಸ ಸ್ಥಳ | ಕೆಲವರಕೊಪ್ಪ ಗ್ರಾಮ |

**ದಿನಾಂಕ : 03-12-2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ ಃ**

1. ಚಾಸಾ-2 ರಿಂದ 9 ರವರ ಪರಿಚಯ ಇರುತ್ತದೆ. ದಿಃ 22-10-2022 ರಂದು ಬೆಳಗ್ಗೆ 9.00 ಗಂಟೆ ಸುಮಾರಿಗೆ ಹಿರೇಬಾಸೂರ ಮತ್ತು ಕೆಲವರಕೊಪ್ಪ ಗ್ರಾಮಗಳ ರಸ್ತೆಯ ನಡುವೆ ಇರುವ ಚಾನಲ್ ಸಮೀಪದ ಬಳಿ ರಸ್ತೆ ತಿರುವಿನಲ್ಲಿ ಅಪಘಾತವಾಗಿರುತ್ತದೆ. ಘಟನಾ ದಿನ ಚಾಸಾ-5 ರವರು ಕೆಲಸದ ನಿಮಿತ್ತ ದ್ವಿಚಕ್ರ ವಾಹನ ಸಂಃಕೆಎ-27-ಇಎನ್-3671 ರ ವಾಹನದಲ್ಲಿ ಹಿರೇಬಾಸೂರ ಗ್ರಾಮಕ್ಕೆ ಹೋಗಿದ್ದರು. ಹಿರೇಬಾಸೂರು ಗ್ರಾಮದಲ್ಲಿ ಕೆಲಸ ಮುಗಿಸಿ ಚಾಸಾ-5 ರವರು ತನ್ನ ಗ್ರಾಮವಾದ ಕೆಲವರಕೊಪ್ಪ ಗ್ರಾಮಕ್ಕೆ ಹಿಂತಿರುಗುವಾಗ ಎದುರು ಬದಿಯಿಂದ ಅಂದರೆ ತಿಳುವಳ್ಳಿಯ ಕಡೆಯಿಂದ ಕೆಲವರಕೊಪ್ಪ ಗ್ರಾಮಕ್ಕೆ ಕೆ ಎಸ್ ಆರ್ ಟಿಸಿ ಬಸ್ ಸಂಃಕೆಎ-27-0568 ರ ಬಸ್ಸನ್ನು ಅದರ ಚಾಲಕನು ವೇಗವಾಗಿ ಚಾಲನೆ ಮಾಡಿಕೊಂಡು ಬಂದು ಚಾಸಾ-5 ರವರ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿರುತ್ತಾನೆಂದು ನನಗೆ ಮಾಹಿತಿ ಬಂದಿರುತ್ತದೆ. ಆ ಸಮಯಕ್ಕೆ ನಾನು ಮನೆಯಲ್ಲಿದ್ದು, ಅಪಘಾತದ ವಿಷಯವನ್ನು ಚಾಸಾ-8 ರವರು ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ತಕ್ಷಣ ನಾನು ಅಪಘಾತ ಸ್ಥಳಕ್ಕೆ ಹೋಗಿದ್ದು, ಅಲ್ಲಿ ನೆರೆದಿದ್ದ ಸ್ಥಳೀಯರು ಅಪಘಾತವು ಸದರಿ ಬಸ್ಸಿನ ಚಾಲಕನ ತಪ್ಪಿನಿಂದ

ಆಗಿರುತ್ತದೆ ಎಂದು ತಿಳಿಸಿರುತ್ತಾರೆ.



2. ನಾನು ಘಟನಾ ಸ್ಥಳಕ್ಕೆ ಹೋದಾಗ ಸದರಿ ಬಸ್ಸು ಮತ್ತು ದ್ವಿಚಕ್ರ ವಾಹನ ಅಪಘಾತದ ಸ್ಥಳದಲ್ಲಿಯೇ ಇದ್ದು ಅಪಘಾತದಲ್ಲಿ ಗಾಯಗೊಂಡಿದ್ದ ಚಾಸಾ-5 ರವರು ಅರೆಪ್ರಜ್ಞಾವಸ್ತೆಯಲ್ಲಿ ಬಿದ್ದಿದ್ದರು. ಸದರಿ ಅಪಘಾತದಿಂದ ಚಾಸಾ-5 ರವರ ಹಣೆಗೆ ರಕ್ತಗಾಯವಾಗಿದ್ದು ಮತ್ತು ಬಲಭುಜಕ್ಕೆ ಗಾಯಗವಾಗಿತ್ತು. ಚಾಸಾ-5 ರವರನ್ನು ಚಿಕಿತ್ಸೆಗಾಗಿ ಚಾಸಾ-7 ರವರು ವಾಹನದ ಮೂಲಕ ಹಾವೇರಿಯ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಸದರಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆಗೆ ಸೂಚಿಸಿದ್ದ ಮೇರೆಗೆ ಚಾಸಾ-5 ರವರನ್ನು ಹುಬ್ಬಳ್ಳಿಯ ಕೀಮ್ಸ ಆಸ್ಪತ್ರೆಗೆ ದಾಖಲಿಸಲಾಯಿತು. ಅಪಘಾತವಾದ ದಿನವೇ ನಾನು ಆಡೂರು ಪೊಲೀಸ್ ಠಾಣೆಯಲ್ಲಿ ಪಿರ್ಯಾದನ್ನು ದಾಖಲಿಸಿರುತ್ತೇನೆ. ಸಾಕ್ಷಿಯು ಪಿರ್ಯಾದನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಪಿರ್ಯಾದನ್ನು ನಿ.ಪಿ-1 ಎಂದು, ಅದರಲ್ಲಿ ಸಾಕ್ಷಿ ಗುರುತಿಸಿದ ಸಹಿಯನ್ನು ನಿ.ಪಿ-1(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಇರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ.

3. ನಾನು ಪಿರ್ಯಾದನ್ನು ನೀಡಿದ ಮರುದಿನ ದಿಃ 23-10-2022 ರಂದು ನಾನು ತೋರಿಸಿದ ಅಪಘಾತವಾದ ಸ್ಥಳದಲ್ಲಿ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಪೊಲೀಸರು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಪೊಲೀಸರು ಬೆಳಗ್ಗೆ 10 ರಿಂದ 11 ಗಂಟೆಯ ಅವಧಿಗೆ ಬರೆದಿರುತ್ತಾರೆ. ಸಾಕ್ಷಿಯು ಘಟನಾ ಸ್ಥಳದ ಪಂಚನಾಮೆಯನ್ನು ನೋಡುತ್ತಿದ್ದು, ಅದರಲ್ಲಿ ತನ್ನ ಸಹಿ ಇದೆ ಎಂದು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಘಟನಾ ಸ್ಥಳದ ಪಂಚನಾಮೆಯನ್ನು ನಿ.ಪಿ-2 ಎಂದು, ಅದರಲ್ಲಿ ಸಾಕ್ಷಿಯು ಗುರುತಿಸಿದ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು. ನಿ.ಪಿ-2 ರ ಪಂಚನಾಮೆಯಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಪಂಚನಾಮೆ ಸಮಯಕ್ಕೆ ಪೊಲೀಸರು ಅಪಘಾತ ಸ್ಥಳದ ಎರಡು ಛಾಯಾ ಚಿತ್ರಗಳ ತೆಗೆದಿರುತ್ತಾರೆ. ಸಾಕ್ಷಿಯು ಸದರಿ ಎರಡು ಛಾಯಾ ಚಿತ್ರಿಗಳನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

ಸದರಿ ಛಾಯಾ ಚಿತ್ರಗಳನ್ನು ನಿ.ಪಿ-3 ಮತ್ತು 4 ಎಂದು ಗುರುತಿಸಲಾಯಿತು.



4. ಅದೇ ದಿನ ತಿಳುವಳ್ಳಿಯ ಹೊರ ಪೊಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ನಾನು ತೋರಿಸಿದ ವಾಹನಗಳಿಗೆ ಸಂಬಂಧಿಸಿದಂತೆ ಪೊಲೀಸರು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 12.00 ರಿಂದ 1.00 ಗಂಟೆ ಅವಧಿಯಲ್ಲಿ ಜರುಗಿಸಿರುತ್ತಾರೆ. ಸದರಿ ಪಂಚನಾಮೆ ಸಮಯಕ್ಕೆ ಚಾಸಾ-3 ಮತ್ತು 4 ರವರು ಹಾಜರಿದ್ದರು. ಅದರಲ್ಲಿ ಇರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ಸಾಕ್ಷಿಯು ಅಪಘಾತಕ್ಕೀಡಾದ ವಾಹನಗಳ ಪಂಚನಾಮೆಯನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಗುರುತಿಸಿದ ಸದರಿ ಪಂಚನಾಮೆ ಯನ್ನು ನಿ.ಪಿ-5 ಎಂದು, ಅದರಲ್ಲಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿ.ಪಿ-5(ಎ) ಎಂದು ಗುರುತಿಸಲಾಯಿತು. ಸದರಿ ಪಂಚನಾಮೆ ಸಮಯಕ್ಕೆ ಪೊಲೀಸರು ಒಂದು ಛಾಯಾ ಚಿತ್ರವನ್ನು ತೆಗೆದುಕೊಂಡಿರುತ್ತಾರೆ. ಸಾಕ್ಷಿಯು ಒಂದು ಛಾಯಾ ಚಿತ್ರವನ್ನು ನೋಡುತ್ತಿದ್ದು, ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಛಾಯಾ ಚಿತ್ರವನ್ನು ನಿ.ಪಿ-6 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದಲ್ಲಿ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಟಿ.ಕೆ ವಕೀಲರಿಂದ:</u>**

1. ನಾನು ಅತಿಥಿ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಚಾಸಾ-5 ರವರ ಮತ್ತು ನನ್ನ ತಂದೆ ಸಹೋದರರು ಎಂದರೆ ಸರಿ. ಚಾಸಾ-6 ರಿಂದ 8 ರವರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಗ್ರಾಮದವರು ಎಂದು ನುಡಿಯುತ್ತಾರೆ. ಅಪಘಾತವಾದಾಗ ನಾನು ಮನೆಯಲ್ಲಿದ್ದೆ. ಅಪಘಾತವಾಗಿದೆ ಎಂದು ಚಾಸಾ-8 ರವರು ನನಗೆ ಬೆಳಗ್ಗೆ 9.00 ಗಂಟೆ ಸುಮಾರಿಗೆ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ನಾನು ವಾಸವಿರುವ ಗ್ರಾಮದಿಂದ ಘಟನಾ ಸ್ಥಳಕ್ಕೆ 1.5 ಕಿ. ಮೀ. ಗಳ ದೂರ ಇದೆ. ಘಟನಾ ಸ್ಥಳಕ್ಕೆ ದ್ವಿಚಕ್ರ ವಾಹನದಲ್ಲಿ ನಾನು ಒಬ್ಬನೇ ಹೋಗಿರುತ್ತೇನೆ. ಹೋಗಿರುತ್ತೇನೆ. ನಿ.ಪಿ-1 ರ ಪಿರ್ಯಾದನ್ನು ನಾನು ಕೈಬರವಣಿಗೆಯಲ್ಲಿ ಬರೆದಿರುತ್ತೇನೆ. ಅಪಘಾತವಾದ ಸಮಯದಲ್ಲಿ ಚಾಸಾ-8 ರವರು ಅಪಘಾತಪಡಿಸಿದ ಬಸ್ಸಿನಲ್ಲೇ ಪ್ರಯಾಣಿಸುತ್ತಿದ್ದು, ಅವರು ನೀಡಿದ ಮಾಹಿತಿಯಂತೆ ನಿ.ಪಿ-1 ರ ಪಿರ್ಯಾದಿಯಲ್ಲಿ

ಇರುವ ಸಂಗತಿಗಳನ್ನು ಬರೆಸಿರುತ್ತೇನೆ.



2. ಅಪಘಾತಕ್ಕೆ ಸಂಬಂಧಿಸಿದಂತೆ ನಾನು ದೂರವಾಣಿ ಮೂಲಕ ಪೊಲೀಸರಿಗೆ ಮಾಹಿತಿ ನೀಡಿರಲಿಲ್ಲ. ಹಿರೇಬಾಸೂರ ಮತ್ತು ಕೆಲವರಕೊಪ್ಪಗ್ರಾಮದ ರಸ್ತೆಯು ಇಂಗ್ಲೀಷಿನ ಜೆ ಅಕ್ಷರದ ರೀತಿಯಲ್ಲಿ ಇದೆ ಎಂದರೆ ಸರಿ. ಅಪಘಾತವಾದ ಸ್ಥಳದ ರಸ್ತೆಯ ಎರಡೂ ಬದಿಗಳಲ್ಲಿ ಎತ್ತರದ ಗಿಡ ಮರಗಳು ಬೆಳೆದುಕೊಂಡಿವೆ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳದ ರಸ್ತೆಯು 12 ಅಡಿ ಅಗಲವಾದ ರಸ್ತೆ ಎಂದರೆ ಗೊತ್ತಿಲ್ಲ. ನನ್ನ ಪ್ರಕಾರ ಸದರಿ ರಸ್ತೆಯು ಸುಮಾರು 15 ಅಡಿಗಳ ಅಗಲ ಇರಬಹುದು. ಘಟನೆಯ ದಿನ ಚಾಸಾ-5 ರವರು ಹಿರೇಬಾಸೂರಿಗೆ ಹೋಗಿ ಕೆಲವರಕೊಪ್ಪ ಗ್ರಾಮಕ್ಕೆ ಹಿಂತಿರುಗುತ್ತಿದ್ದನು. ಘಟನಾ ಸ್ಥಳದ ರಸ್ತೆಯು ಯು ಶೇಪಿನಲ್ಲಿ ಇದೆ ಎಂದರೆ ಸರಿ.  ಹಿರೇಬಾಸೂರಿನಿಂದ ಕೆಲವರಕೊಪ್ಪಕ್ಕೆ ಬರುವಾಗ ರಸ್ತೆಯು ಯು ಶೇಪಿನಲ್ಲಿದೆ ಎಂದರೆ ಸರಿ. ಕೆಲವರಕೊಪ್ಪ ಗ್ರಾಮದಿಂದ ಹಿರೇಬಾಸೂರಿಗೆ ಬರುತ್ತಿದ್ದ ಬಸ್ಸಿನ ರಸ್ತೆಯು ನೇರವಾಗಿದೆ ಎಂದರೆ ಸರಿ.

3. ಚಾಸಾ-5 ಪೆಟ್ರೋಲ್ ಬಂಕಿನಲ್ಲಿಕೆಲಸ ಮಾಡುತ್ತಾನೆ. ಆತನು ಘಟನಾ ದಿನದಂದು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನವು ಆತನ ಮಾಲೀಕತ್ವದ ವಾಹನ. ಘಟನಾ ದಿನ ಚಾಸಾ-5 ರವರೇ ದ್ವಿಚಕ್ರ ವಾಹನವನ್ನು ವೇಗವಾಗಿ ಚಾಲನೆ ಮಾಡಿಕೊಂಡುಬಂದಿದ್ದು ಅಲ್ಲದೇ ಆತನ ಎರಡೂ ಕಿವಿಗಳಲ್ಲಿ ಬ್ಲೂ ಟೂತ್ ಗಳನ್ನು ಹಾಕಿಕೊಂಡು ಸಂಗೀತವನ್ನು ಕೇಳುತ್ತಾ ಬಂದ ಕಾರಣ ತನ್ನ ಎದುರುಬದಿಯಿಂದ ರಸ್ತೆಯ ಎಡಬದಿಯಲ್ಲಿ ಆರೋಪಿಯು ಬಸ್ಸನ್ನು ಚಾಲನೆ ಮಾಡಿಕೊಂಡು ಬರುತ್ತಿದ್ದ ವಾಹನಕ್ಕೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸಾಕ್ಷಿಯು ಚಾಸಾ-5 ರವರು ಕಿವಿಗಳಿಗೆ ಬ್ಲೂ ಟೂತ್ ಗಳನ್ನು ಹಾಕಿಕೊಂಡು ಮತ್ತು ವೇಗವಾಗಿ ದ್ವಿಚಕ್ರ ವಾಹನವನ್ನು ಚಾಲನೆ ಮಾಡಿಕೊಂಡು ಬರುತ್ತಿದ್ದರೋ ಅಥವಾ ಇಲ್ಲವೋ ನಾನು ನೋಡಿಲ್ಲ ಎಂದು ನುಡಿಯುತ್ತಾರೆ.

4. ನಾನು ಘಟನಾ ಸ್ಥಳಕ್ಕೆ ಹೋದಾಗ ಚಾಸಾ-5 ರವರು ಘಟನಾ ಸ್ಥಳದಲ್ಲಿಯೇ ಇದ್ದರು. ಅಪಘಾತಕ್ಕೆ ಚಾಸಾ-5 ರವರ ವೇಗ ಮತ್ತು ಅಜಾರೂಕತೆಯ ಚಾಲನೆ ಕಾರಣ ಇದ್ದರೂ, ಕೆ ಎಸ್ ಆರ್ ಟಿ ಸಿ ಸಂಸ್ಥೆಯಿಂದ ಪರಿಹಾರವನ್ನು ಪಡೆಯುವ ಉದ್ದೇಶಕ್ಕೆ ಚಾಸಾ-5 ರವರು ನನ್ನ ಸಂಬಧಿ ಇರುವುದರಿಂದ ಸುಳ್ಳು ಫಿರ್ಯಾದು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ-3 ರ ಛಾಯಾ ಚಿತ್ರದಲ್ಲಿ ಕಂಡು ಬರುವಂತೆ ರಸ್ತೆಯ ಎರಡೂ ಬದಿಯಲ್ಲಿ

ಗುಂಪಾದ ಮರಗಳು ಇವೆ ಎಂದರೆ ಸರಿ. ಅದೇ ಛಾಯಾ ಚಿತ್ರದಲ್ಲಿ ಕಂಡು



ಬರುವಂತೆ ರಸ್ತೆ ಬದಿಯಲ್ಲಿ ವಿದ್ಯುತ್ ಕಂಬಗಳು ಇವೆ ಎಂದರೆ ಸರಿ. ಅಪಘಾತವಾದ ಸ್ಥಳದ ಪೂ-ಬಸಪ್ಪ ಎಂಬುವವರ ಜಮೀನು, ಪ-ಮಹಾದೇವಪ್ಪ ರವರ ಜಮೀನು, ಉ- ಕೆಲವರಕೊಪ್ಪ ಗ್ರಾಮಕ್ಕೆ ಹೋಗುವ ರಸ್ತೆ, ದ- ಹಿರೇಬಾಸೂರು ಗ್ರಾಮಕ್ಕೆ ಹೋಗುವ ರಸ್ತೆ. ಘಟನಾ ಸ್ಥಳಕ್ಕೆ ಪಂಚನಾಮೆಯನ್ನು ಜರುಗಿಸಲು ಇಬ್ಬರು ಪೊಲೀಸರು ಬಂದಿದ್ದರು. ಪಂಚನಾಮೆ ಜರುಗಿಸಲು ಅವರು ಬಂದಾಗ ಬೆಳಗ್ಗೆ 10.00 ಗಂಟೆ ಸಮಯ ಆಗಿತ್ತು. ನಿ.ಪಿ-2 ರ ಪಂಚನಾಮೆಯನ್ನು ಬೆಳಗ್ಗೆ 10.00 ರಿಂದ 11.00 ಗಂಟೆ ಅವಧಿಯಲ್ಲಿ ಜರುಗಿಸಿ, ಅಪಘಾತವಾದ ಸ್ಥಳವನ್ನು ಪರಿಶೀಲಿಸಿ, ಅದಕ್ಕೆ ನನ್ನ ಸಹಿ ಪಡೆದು ಮತ್ತು ಛಾಯಾ ಚಿತ್ರ ತೆಗೆದಿರುತ್ತಾರೆ. ನಿ.ಪಿ-3 ಮತ್ತು 4 ರ ಛಾಯಾ ಚಿತ್ರಗಳನ್ನು ಅಪಘಾತದ ಮರುದಿನದ ಸಂಜೆ 5.00 ಗಂಟೆಗೆ ತೆಗೆದಿರುತ್ತಾರೆ ಎಂದರೆ ಸರಿ.

5. ವಾಹನ ಪರಿಶೀಲನಾ ಪಂಚನಾಮೆಯನ್ನು ಸಹ ಘಟನಾ ಸ್ಥಳ ಪಂಚನಾಮೆ ಬರೆದ ದಿನವೇ ಮಧ್ಯಾಹ್ನ 12.00 ರಿಂದ 1.00 ಗಂಟೆ ಅವಧಿಯಲ್ಲಿ ಬರೆದಿರುತ್ತಾರೆ. ಸದರಿ ಅವಧಿಯಲ್ಲಿ ಪೊಲೀಸರು ನನ್ನಿಂದ ವಿವರಗಳನ್ನು ಪಡೆದು, ಫೋಟೋಗಳನ್ನು ತೆಗೆದು ನನ್ನ ಸಹಿ ಪಡೆದಿರುತ್ತಾರೆ. ನಿ.ಪಿ-2 ರ ಪಂಚನಾಮೆಯನ್ನು ಘಟನಾ ಸ್ಥಳದಲ್ಲಿ ಪೊಲೀಸರು ನನ್ನ, ಚಾಸಾ-2 ಮತ್ತು 3 ರವರ ಸಮಕ್ಷಮ ಜರುಗಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೆ ಚಾಸಾ-5 ರವರ ತಪ್ಪು ಕಾರಣ ಇರುವುದರಿಂದ, ಆತನು ನನ್ನ ದೊಡ್ಡಪ್ಪನ ಮಗ ಎಂದು ಸುಳ್ಳು ಪಿರ್ಯಾದನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ